ಹಳ್ಳಿಯ ಹೊನ್ನು ಯೋಜನೆ ಕುರಿತು

1933 (2614) ಶ್ರೀ ದಿನೇಶ್ ಗುಂಡೂರಾವ್ (ಗಾಂಧಿನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1999-2000ನೇ ಸಾಲಿನಲ್ಲಿ 'ಹಳ್ಳಿಯ ಹೊನ್ನು' ಯೋಜನೆಗೆ ನಿಗದಿಪಡಿಸಲಾದ ಹಣ ಎಷ್ಟು; ಈ ಯೋಜನೆಯನ್ನು ಯಾವ ಯಾವ ಹಳ್ಳಿಗಳಲ್ಲಿ ಜಾರಿಗೊಳಿಸಲಾಗಿದೆ;

ಆ) ಈ ಯೋಜನೆಯನ್ನು ಜಾರಿಗೊಳಿಸಲು ವಶಪಡಿಸಿಕೊಂಡಿರುವ ಜಮೀನು ಎಷ್ಟು; ಅದಕ್ಕಾಗಿ ವಿನಿಯೋಗಿಸಲಾದ ಹಣ ಎಷ್ಟು; (ಪ್ರತಿ ಹಳ್ಳಿವಾರು ಮಾಹಿತಿ ನೀಡುವುದು)

ಇ) ಈ ಯೋಜನೆಯಿಂದ ಹಳ್ಳಿಯ ಜನರಿಗಾಗಿರುವ ಪ್ರಯೋಜನವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) 'ಹಳ್ಳಿಯ ಹೊನ್ನು' ಯೋಜನೆಗೆ 1999-2000ನೇ ಸಾಲಿಗೆ ರೂ.3.00 ಕೋಟಿ ಅನುದಾನ ನಿಗದಿಪಡಿಸಲಾಗಿತ್ತು. ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. ಸಮಗ್ರ ರೀತಿಯಲ್ಲಿ ಗ್ರಾಮೀಣ ನೈರ್ಮಲ್ಯವನ್ನು ರೂಪಿಸುವ ಸಲುವಾಗಿ ಇನ್ನೂ ಕೆಲವು ಅಂಶಗಳನ್ನೊಳಗೊಂಡಂತೆ ಈ ಯೋಜನೆಯನ್ನು ಮಾರ್ಪಾಡು ಮಾಡಲು ಉದ್ದೇಶಿಸಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಆರೋಗ್ಯ ಕೇಂದ್ರಗಳಿಗೆ ವಿತರಿಸುವ ಔಷಧಿ

1935 (2347) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಉಡುಪಿ ಜಿಲ್ಲೆಯ ಆರೋಗ್ಯ ಕೇಂದ್ರ ಮತ್ತು ಘಟಕಗಳಿಗೆ ಸರ್ಕಾರಿ ಔಷಧಿ ಮಳಿಗೆಯಿಂದ ವಿತರಿಸಲಾದ ಔಷಧಿಯು ಆರೋಗ್ಯ ಘಟಕ ಮತ್ತು ಕೇಂದ್ರದಿಂದ ಬಂದ ಇಂಡೆಂಟ್‌ಗೆ ಸರಿಯಾಗಿ ವಿತರಣೆಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಔಷಧಿಯನ್ನು ಆರೋಗ್ಯ ಕೇಂದ್ರ ಹಾಗೂ ಘಟಕಕ್ಕೆ ಕಳುಹಿಸುವ ಬದಲು ಅಲ್ಲಿಂದ ಸಿಬ್ಬಂದಿಗಳು ಬಂದು ಬೆಂಗಳೂರಿನಿಂದ ತೆಗೆದುಕೊಂಡು ಹೋಗುವ ವ್ಯವಸ್ಥೆ ಇರುವುದು ನಿಜವೆ?

ಡಾ: ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಕಳುಹಿಸಿದ ಬೇಡಿಕೆ ಪತ್ರಗಳನ್ವಯ ಔಷಧಿಗಳನ್ನು ಸರಬರಾಜು ಮಾಡಲಾಗಿರುತ್ತದೆ.

ಆ) ಹೌದು.

ಸಾಗಾಣಿಕೆ ದರಗುತ್ತಿಗೆ ಇಲ್ಲದ ಪ್ರಯುಕ್ತ, ತಾತ್ಕಾಲಿಕವಾಗಿ ಆರೋಗ್ಯ ಕೇಂದ್ರದವರೆ ಔಷಧಿಗಳನ್ನು ತೆಗೆದುಕೊಂಡು ಹೋಗುವ ವ್ಯವಸ್ಥೆ ಮಾಡಿರುತ್ತದೆ.